ಓ.ಎಸ್. ನಂ.31/2018 ರಲ್ಲಿ
ಪಿ.ಡಬ್ಲ್ಯೂ-1(ರಿಯಾಜ್ ಖಾನ್)

ದಿನಾಂಕ 24.08.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ.ಪಿ.ಆರ್., ವಕೀಲರಿಂದಃ-

4. ಓ.ಎಸ್. 118/2013 ದಾವೆಯ ಬಗ್ಗೆ ಈ ದಾವೆಯಲ್ಲಿ ನಾನು ಹೇಳಿಲ್ಲ. ಆ ಕೇಸನ್ನು ಹಾಕಿ ನೀವೇ ವಾಪಸ್ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಅವರು ರಾಜಿಗೆ ಬಂದು ನಾನು ಒಪ್ಪಿದ್ದೆ, ಅವರು ಚೆಕ್ ಕೊಟ್ಟಿದ್ದರು ಅದು ಅಮಾನ್ಯಗೊಂಡಿತ್ತು ಎಂದು ನುಡಿಯುತ್ತಾರೆ. ಸದರಿ ದಾವೆಯ ದಾಖಲೆಗಳು ಮತ್ತು ದಾವೆಯನ್ನು ವಾಪಸ್ ತೆಗೆದುಕೊಂಡಿರುವ ಮೆಮೋವನ್ನು ಈ ಕೇಸಿನಲ್ಲಿ ಹಾಜರುಪಡಿಸಿಲ್ಲ. ಒಪ್ಪಿಗೆ ಪತ್ರದಲ್ಲಿ ಏನೆಲ್ಲಾ ಷರುತ್ತುಗಳಿವೆ ಎಂದು ನನಗೆ ಗೊತ್ತಿಲ್ಲ. ಒಪ್ಪಿಗೆ ಪತ್ರದ ಷರುತ್ತುಗಳ ಬಗ್ಗೆ ಹಿಂದೆ ದಾವೆ ವಾಪಸ್ ತೆಗೆದುಕೊಳ್ಳುವಾಗ ತಿಳಿಸಿಲ್ಲ. ಆ ದಾವೆಯನ್ನು ನೀವೇ ಕೇಸು ನಡೆಸಲು ಇಷ್ಟವಿಲ್ಲವೆಂದು ನಿಮ್ಮ ವಕೀಲರ ಮುಖಾಂತರ ವಾಪಸ್ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ದಾವೆಯನ್ನು ವಾಪಸ್ ತೆಗೆದುಕೊಳ್ಳಲು ಸಲ್ಲಿಸಿದ್ದ ಮೆಮೋವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ಹಿಂದಿನ ದಾವೆಯ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರುಪಡಿಸಿದರೆ ಈ ಕೇಸು ನಿಲ್ಲುವುದಿಲ್ಲವೆಂದು ಈ ಕೇಸಿನಲ್ಲಿ ಆ ದಾವೆಯ ಬಗ್ಗೆ ಹೇಳಿಲ್ಲ ಎಂದರೆ ಸಾಕ್ಷಿಯು ಅವರೇ ಬಂದು ಕೇಳಿಕೊಂಡಿದ್ದಕ್ಕೆ ರಾಜಿಗೆ ಒಪ್ಪಿಗೆ, ಚೆಕ್ ಕೊಟ್ಟಿದ್ದರು, ಅದು ಬೌನ್ಸ್ ಆಯಿತು ಎಂದು ನುಡಿಯುತ್ತಾರೆ. ಆ ಕೇಸಿನಲ್ಲಿ ಯಾರು ಯಾರು ಪಾರ್ಟಿಗಳಾಗಿದ್ದರು ಅವರನ್ನೆಲ್ಲಾ ಈ ಕೇಸಿನಲ್ಲಿ ಪಾರ್ಟಿಯಾಗಿ ಮಾಡಿಲ್ಲ ಎಂದರೆ ಸರಿ. ಆ ಕೇಸಿನಲ್ಲಿ ನನಗೆ

ತೊಂದರೆಯಾಗಿದೆ ಕೇಸನ್ನು ವಾಪಸ್ ಪುನರ್ ಸ್ಥಾಪಿಸಿ ಎಂದು ಕೇಳಿಕೊಂಡು ನಾನು ಆ ದಾವೆಯಲ್ಲಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ.

5. ಒಪ್ಪಿಗೆ ಪತ್ರದಲ್ಲಿ ಎಷ್ಟು ಬೆಲೆ ತೋರಿಸಿದ್ದಾರೆಂದು ನಾನು ನೋಡಿಲ್ಲ. ಒಪ್ಪಿಗೆ ಪತ್ರದಲ್ಲಿ 9 ಲಕ್ಷ ರೂಪಾಯಿ ಪಡೆದುಕೊಂಡು, ಸ್ವತ್ತಿನಲ್ಲಿ ಹಕ್ಕನ್ನು ಬಿಟ್ಟುಕೊಡುತ್ತಿದ್ದೇನೆಂದು ಬರೆದಿದೆ ಎಂದರೆ ಸಾಕ್ಷಿಯು 21 ಲಕ್ಷಕ್ಕೆ ಒಪ್ಪಿಕೊಂಡಿದ್ದರು ಎಂದು ನುಡಿಯುತ್ತಾರೆ. ಈ ಕೇಸು ಹಾಕಲು ವಕೀಲರಿಗೆ ಮಾಹಿತಿ ಕೊಟ್ಟದ್ದು ಮತ್ತು ದಾಖಲೆ ಕೊಟ್ಟದ್ದು ನಾನೇ. ಈ ದಾವೆಯನ್ನು ನಾನು ಕೊಟ್ಟ ಮಾಹಿತಿ ಮತ್ತು ದಾಖಲೆಯಂತೆ ನಮ್ಮ ವಕೀಲರು ಸಲ್ಲಿಸಿದ್ದಾರೆ ಎಂದರೆ ಸರಿ. ದಾವೆಯ ಮೌಲ್ಯ 10,50,000/- ರೂ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ನಾನು ಹೇಳಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು 4,50,000/- ರೂ ಡಿ.ಡಿ., 6,00,000/- ರೂಗಳ ಚೆಕ್ಕನ್ನು ಕೊಟ್ಟಿದ್ದು ನೀವು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು 6,00,000/- ರೂಗಳ ಚೆಕ್ ಬೌನ್ಸ್ ಆಗಿದೆ ಎಂದು ನುಡಿಯುತ್ತಾರೆ.

6. ವಾದಪತ್ರದ ಪ್ಯಾರಾ 6 ರಲ್ಲಿ 4,50,000/- ರೂಗಳ ಡಿ.ಡಿ., ಮತ್ತು 6,00,000/- ರೂಗಳ ಚೆಕ್ ನಗದೀಕರಣಗೊಂಡಿದೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ಎರಡು ಚೆಕ್, ಎರಡು ಡಿ.ಡಿ.,ಗಳು ಕೊಟ್ಟಿದ್ದು, ಡಿ.ಡಿ. ಹಣ ಮಾತ್ರ ಬಂದಿದೆ, ಚೆಕ್‌ಗಳು ಅಮಾನ್ಯಗೊಂಡಿವೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ 10,50,000/- ರೂಗಳು ಬಂದಿದೆ ಎಂದು ಬರೆಸಿದ್ದೀರಿ ಎಂದರೆ ಸಾಕ್ಷಿಯು ಡಿ.ಡಿ ಹಣ ಬಂದಿದೆ, ಚೆಕ್‌ಗಳು ಅಮಾನ್ಯಗೊಂಡಿವೆ ಎಂದು ನುಡಿಯುತ್ತಾರೆ. ನನಗೆ

ಒಟ್ಟು 10,50,000/- ರೂಗಳು ಸೇರಿದೆ. ಒಪ್ಪಿಗೆ ಪತ್ರಕ್ಕಿಂತ ನಿಮಗೆ ಹೆಚ್ಚಿನ ಹಣ ಸೇರಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಚೆಕ್‌ಗಳು ಅಮಾನ್ಯಗೊಂಡಿವೆ ಎಂದು ಪ್ರತಿವಾದಿಗಳ ವಿರುದ್ಧ ಕ್ರಿಮಿನಲ್ ಕೇಸು ಹಾಕಿಲ್ಲ. ಚೆಕ್‌ಗಳು ಅಗ್ರಿಮೆಂಟ್‌ನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ.

7. ಪ್ರತಿವಾದಿಗಳು ಬಾಕಿ ಹಣ ಕೊಡಬೇಕೆಂದು ಈ ಕೇಸು ಹಾಕಿಲ್ಲ. ಹಿಂದಿನ ದಾವೆಯಲ್ಲಿ ಪ್ರತಿವಾದಿಗಳಿಗೆ ಒಪ್ಪಿಗೆ ಪತ್ರ ಬರೆದುಕೊಟ್ಟು ವಾಪಸ್ ತೆಗೆದುಕೊಂಡು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಹೇಳಿರುವ ವ್ಯಾಜ್ಯ ಕಾರಣ ಒಪ್ಪಿಗೆ ಪತ್ರದಲ್ಲಿ ಇಲ್ಲ ಎಂದರೆ ಸಾಕ್ಷಿಯು ಇರುವುದನ್ನೇ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಒಪ್ಪಿಗೆ ಪತ್ರದಲ್ಲಿ ಬೇರೆ ದಾವೆಯನ್ನು ಸಲ್ಲಿಸಬಹುದು ಎಂದು ಬರೆದಿಲ್ಲ ಎಂದರೆ ಸಾಕ್ಷಿಯು ಅವರೇ ಬರೆದುಕೊಂಡಿದ್ದಾರೆ, ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಮನೆ ಮಾಡಿಕೊಳ್ಳಲು ಅಗ್ರಿಮೆಂಟ್ ಮಾಡಿಕೊಂಡಿದ್ದೆ ಎಂದು ದಾವೆಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿಲ್ಲ. ಈ ಬಗ್ಗೆ ದಾಖಲೆ ಸಹ ಕೊಟ್ಟಿಲ್ಲ. ನೀವು 21 ಲಕ್ಷಕ್ಕೆ ನ್ಯಾಯಾಲಯ ಶುಲ್ಕ ಪಾವತಿಸಬೇಕು ಎಂದರೆ ಸಾಕ್ಷಿಯು ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಬೇರೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿಗಳು ಏನು ಲಿಖಿತ ತಕರಾರು ಬರೆಸಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಪ್ರತಿವಾದಿಗಳು ನಿಮ್ಮ ನಡುವೆ ಏನೇನು ವ್ಯವಹಾರ ಆಗಿದೆ, ಹಣ ಕೊಟ್ಟ ಬಗ್ಗೆ ಒಪ್ಪಿಗೆ ಪತ್ರ ಆಗಿದೆ ಆ ಬಗ್ಗೆ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ ಎಂದರೆ ಸಾಕ್ಷಿಯು ನಾವು ತಿಳಿಸಿದ್ದೇವೆ ಎಂದು

ನುಡಿಯುತ್ತಾರೆ.

8. ದಿನಾಂಕ 16.11.2005 ರಲ್ಲಿ ಪ್ರತಿವಾದಿಗಳು ದಾವಾ ಸ್ವತ್ತನ್ನು ಮೂಸೇ ಖಾನ್‌ರವರಿಂದ ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಆಗಿದೆ ಅವರೇ ಭಾಗ ಮಾಡಿ ನನ್ನ ಭಾಗವನ್ನು ಅವರೇ ಇಟ್ಟುಕೊಂಡರು, ಮತ್ತೆ ತೀರ್ಮಾನ ಮಾಡಿ ಚೆಕ್ ಬೌನ್ಸ್ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು 1983 ರಲ್ಲಿ ಮೂಸೇ ಖಾನ್‌ರವರು ಸ್ವಯಾರ್ಜಿತವಾಗಿ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಇಲ್ಲ, ನನ್ನ ತಾತರವರು ಅದಲು ಬದಲು ಮಾಡಿಕೊಂಡರು ಎಂದು ನುಡಿಯುತ್ತಾರೆ. ಅದಲು ಬದಲು ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ. ಒಪ್ಪಿಗೆ ಪತ್ರದ ಸಾಕ್ಷಿದಾರರನ್ನು ಅವರು ಬಂದರೆ ವಿಚಾರಣೆ ಮಾಡಿಸುತ್ತೇನೆ. ಒಪ್ಪಿಗೆ ಪತ್ರದಲ್ಲಿ ತೋರಿಸಿರುವುದಕ್ಕಿಂತ ಪ್ರತಿವಾದಿಗಳು ಒಂದೂವರೆ ಲಕ್ಷ ಹೆಚ್ಚಾಗಿ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹೆಚ್ಚಿಗೆ ಹಣ ಕೊಟ್ಟಿದ್ದಾರೆಂದು ತೋರಿಸಲು ದಾಖಲೆ ಇದೆ ಎಂದರೆ ಸಾಕ್ಷಿಯು ಹೆಚ್ಚಿಗೆ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

9. ಒಪ್ಪಿಗೆ ಪತ್ರ ಬರೆದುಕೊಡುವ ಮುಂಚೆ ಪ್ರತಿವಾದಿಗಳಿಂದ ಎರಡು ಚೆಕ್‌ಗಳನ್ನು ಭದ್ರತೆಗಾಗಿ ಪಡೆದುಕೊಂಡಿದ್ದು ಅವುಗಳನ್ನು ವಾಪಸ್ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಆ ಎರಡೂ ಚೆಕ್ಗಳನ್ನು ನಮೂದಿಸಿಯೇ ಹಿಂದಿನ ದಾವೆಯನ್ನು ಮೆಮೋ ಸಲ್ಲಿಸಿ ವಾಪಸ್ ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಭದ್ರತೆಗೆ ಪಡೆದುಕೊಂಡ ಚೆಕ್‌ಗಳನ್ನು ವಾಪಸ್ ಕೊಡುವಂತೆ ಮಾತುಕತೆಯಾಗಿತ್ತು,

ನೀವು ವಾಪಸ್ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ರಿಜಿಸ್ಟರ್ ಕಛೇರಿಯಲ್ಲಿ 10,50,000/- ರೂಗಳ ಚೆಕ್ ಕೊಟ್ಟಿದ್ದರು, 10,50,000/- ರೂಗಳ ಡಿ.ಡಿ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಪಂಚಾಯಿತಿ ಆಗಿ ಚೆಕ್‌ಗಳನ್ನು ವಾಪಸ್ ಕೊಡುವಂತೆ, ಕೇಸನ್ನು ಮುಂದುವರೆಸದಂತೆ ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ.

10. ನಿಪಿ-2 ಕ್ರಯಪತ್ರದಲ್ಲಿ ನಾನು ಪಾರ್ಟಿ ಅಲ್ಲ ಎಂದರೆ ಸರಿ. ಮೂಸೇ ಖಾನ್‌ರವರಿಗೆ ನಾನು ಸಂಬಂಧಿಯಾಗಿದ್ದು, ಅದನ್ನು ದುರುಪಯೋಗಪಡಿಸಿಕೊಂಡು ಹಿಂದಿನ ದಾವೆ ಹಾಗೂ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರ ಬಿಟ್ಟರೇ ಪ್ರತಿವಾದಿಗಳು ನಿಮಗೆ ಹಣ ಕೊಡಬೇಕು ಎಂದು ತೋರಿಸಲು ಬೇರೆ ದಾಖಲೆ ಇಲ್ಲ ಎಂದರೆ ಸಾಕ್ಷಿಯು ಚೆಕ್ ಇದೆಯಲ್ಲಾ ಎಂದು ನುಡಿಯುತ್ತಾರೆ. ನಿಪಿ-2 ಕ್ರಯಪತ್ರದಲ್ಲಿ ತೋರಿಸಿರುವ ಮಾರುಕಟ್ಟೆ ಮೌಲ್ಯಕ್ಕಿಂತ ಹೆಚ್ಚಿನ ಹಣವನ್ನು ಒಪ್ಪಿಗೆ ಪತ್ರದಲ್ಲಿ ತೋರಿಸಿ ನನಗೆ ಪ್ರತಿವಾದಿಗಳು ಹೆಚ್ಚಿಗೆ ಹಣ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮೌಲ್ಯ ದಾವೆ ಸಲ್ಲಿಸುವ ಕಾಲಕ್ಕೆ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ, ಆದರೆ 4 ಜನರ ತೀರ್ಮಾನದಂತೆ ಚೆಕ್ ಮತ್ತು ಡಿ.ಡಿ ಕೊಟ್ಟಿದ್ದರು, ಚೆಕ್ ಬೌನ್ಸ್ ಮಾಡಿದರು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಮೌಲ್ಯವನ್ನು ತೋರಿಸಿ ಮೂಸೇ ಖಾನ್‌ರವರ ಕುಟುಂಬದ ಸದಸ್ಯರನ್ನು ಸೇರಿಸಿ ಭಾಗ ಕೇಳಿ ಈ ದಾವೆ ಸಲ್ಲಿಸಿಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು 2005 ರಲ್ಲಿ ಪ್ರತಿವಾದಿಗಳು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಪ್ರತಿವಾದಿಗಳು ನನ್ನಿಂದ ಯಾವುದೇ ಬಾಕಿ ಹಣ ಉಳಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

<u>ಓ.ಎಸ್. ನಂ.31/2018 ರಲ್ಲಿ</u>
ಪಿ.ಡಬ್ಲ್ಯೂ-1(ರಿಯಾಜ್ ಖಾನ್)

11. ಮೂಸೇ ಖಾನ್‌ರವರ ರಿಜಿಸ್ಟರ್ ಪತ್ರವನ್ನು ನಾನು ಪ್ರಶ್ನೆ ಮಾಡಿಲ್ಲ, ಏಕೆಂದರೆ ನಾನು ಸಹಿ ಮಾಡಿಲ್ಲ. ಪ್ರತಿವಾದಿ 1 ಮತ್ತು 2 ರವರು ಭಾಗ ಮಾಡಿಕೊಂಡಿರುವುದನ್ನು ನಾನು ಈ ದಾವೆಯಲ್ಲಿ ಪ್ರಶ್ನಿಸಿಲ್ಲ. 2 ನೇ ಪ್ರತಿವಾದಿ 3 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದನ್ನು ಈ ಕೇಸಿನಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತೇ ಇಲ್ಲ ಎಂದು ನುಡಿಯುತ್ತಾರೆ. ನಾನು ಕೊಟ್ಟಿರುವ ನೋಟಿಸ್‌ಗೆ ವಿರುದ್ಧವಾಗಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ತಪ್ಪು ಮಾಹಿತಿ ಕೊಟ್ಟು, ಒಪ್ಪಿಗೆ ಪತ್ರದಂತೆ ಮೌಲ್ಯ ತೋರಿಸದೇ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕಿಲ್ಲ, ಪ್ರತಿವಾದಿಗಳಿಗೆ ತೊಂದರೆ ಕೊಡಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಕೊಟ್ಟಿದ್ದ ಚೆಕ್‌ಗಳು ಅಮಾನ್ಯಗೊಂಡಿದ್ದಲ್ಲಿ ಕ್ರಿಮಿನಲ್ ಕೇಸು ಹಾಕಿಕೊಳ್ಳಬಹುದಿತ್ತು, ನಾನು ಪ್ರತಿವಾದಿಗಳಿಂದ ಹೆಚ್ಚಿನ ಹಣ ಪಡೆಯಬೇಕೆಂದು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹಾಗೂ ನಮ್ಮ ನಡುವೆ ಆಗಿರುವ ಹಣದ ವ್ಯವಹಾರ ಎಲ್ಲಾ ಗೊತ್ತಿದ್ದು, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.